ಇಂಡಿಯಾ ಫೌಂಡೇಶನ್ ಫಾರ್ ದಿ ಆರ್ಟ್ಸ್ (IFA)
ಕಲಾ ಸಂಶೋಧನಾ ಕಾರ್ಯಕ್ರಮಕ್ಕಾಗಿ
ಪ್ರಸ್ತಾವನೆಗಳಿಗಾಗಿ ವಿನಂತಿ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : ಬುಧವಾರ, ಆಗಸ್ಟ್ 16, 2023, 11:59 PM (IST)

ಕಲಾ ಸಂಶೋಧನಾ ಕಾರ್ಯಕ್ರಮ ವಿದ್ವಾಂಸರು, ಸಂಶೋಧಕರು ಮತ್ತು ಕಲಾವಿದರನ್ನು ಭಾರತದ ಕಲಾಪ್ರಕಾರಗಳ ವಿವಿಧ ಇತಿಹಾಸಗಳು ಮತ್ತು ಅಭಿವ್ಯಕ್ತಿಗಳ ಕುರಿತು ಸಂಶೋಧನೆಯಲ್ಲಿ ತೊಡಗಿಸುತ್ತದೆ. ಈ ಕಾರ್ಯಕ್ರಮವು ವಿಶಾಲ ದೃಷ್ಟಿಕೋನಗಳು, ತಿಳುವಳಿಕೆಗಳು, ವ್ಯಾಖ್ಯಾನಗಳು ಮತ್ತು ಕಲೆಯಲ್ಲಿ ಹೊಸಬಗೆಯ ತೊಡಗಿಸಿಕೊಳ್ಳುವಿಕೆಗಳನ್ನು ಬೆಳೆಸಲು ಬಯಸುತ್ತದೆ. ನಮ್ಮ ಕಲಾ ಸಂಶೋಧನಾ ಕಾರ್ಯಕ್ರಮಕ್ಕಾಗಿ ನಾವು, ಐಎಫ್ಎ ಜಾರಿಗೊಳಿಸುವ ಸಂಶೋಧನಾ ಯೋಜನೆಗಳನ್ನು ಕೈಗೊಳ್ಳಲು ಆಸಕ್ತಿಯುಳ್ಳ ಸಂಶೋಧಕರು ಮತ್ತು ಕಲಾವಿದರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿದ್ದೇವೆ. ಈ ಯೋಜನೆಗಳು ಕಡೆಗಣಿಸಲ್ಪಟ್ಟ ಅಥವಾ ಹೆಚ್ಚು ಅನ್ವೇಷಣೆಗೊಳಗಾಗದ ವಿಷಯಗಳನ್ನು ಪರಿಶೀಲಿಸಬಹುದು; ಶಾಸ್ತ್ರ ಹಾಗೂ ಅಭ್ಯಾಸದ ನಡುವೆ ಸಂವಾದವನ್ನು ಕಲ್ಪಿಸುವಂಥದ್ದಾಗಿರಬಹುದು; ಕಲಾಭ್ಯಾಸವನ್ನು ಹೊಸ ರೀತಿಯಲ್ಲಿ ಅರ್ಥೈಸಬಹುದು, ಹೊಸ ಪರಿಕಲ್ಪನೆಗಳನ್ನು ಹುಟ್ಟುಹಾಕಲು ಅಂತರ್ಶಿಸ್ತೀಯ ವಿಧಾನಗಳನ್ನು ಬಳಸಬಹುದು, ಇತ್ಯಾದಿ.

ಸಂಶೋಧನಾ ಯೋಜನೆಗಳಿಗೆ ಸ್ಪಷ್ಟ ಸಂಶೋಧನಾ ಉದ್ದೇಶಗಳು, ವಿಸ್ತೃತ ಹಿನ್ನೆಲೆ ಮಾಹಿತಿ ಸಂಗ್ರಹ, ಮುಖ್ಯ ಸಂಶೋಧನಾ ಪ್ರಶ್ನೆಗಳು, ನಿಖರವಾದ ಸಾಂದರ್ಭಿಕ ಕಾರ್ಯವಿಧಾನಗಳು ಹಾಗೂ ಸಾರ್ವಜನಿಕವಾಗಿ ಹಂಚಿಕೊಳ್ಳಲಾಗುವ ನಿರ್ದಿಷ್ಟ ಫಲಿತಾಂಶಗಳು ಇರಬೇಕಾದುದು ಅವಶ್ಯಕ. ಈ ಫಲಿತಾಂಶಗಳು ಪುಸ್ತಕಗಳು, ಪ್ರಬಂಧಗಳು, ಚಲನಚಿತ್ರಗಳು, ಮಿಂದಾಣಗಳು (ವೆಬ್ಸೈಟ್), ಬಹು-ಮಾಧ್ಯಮ (ಮಲ್ಟಿ ಮೀಡಿಯಾ) ಪ್ರದರ್ಶನಗಳು ಇತ್ಯಾದಿ ಆಗಿರಬಹುದು.
ಈ ಪ್ರಕಟಣೆ (ಯೋಜನಾ ಪ್ರಸ್ತಾವನೆಗಳಿಗಾಗಿ ವಿನಂತಿ)ಯನ್ನು ಇತರ ಭಾರತೀಯ ಭಾಷೆಗಳಲ್ಲಿ ಓದಲು ಇಲ್ಲಿ ಕ್ಲಿಕ್ ಮಾಡಿ.

**ಯೋಜನೆಯ ಅವಧಿ:**
ಕನಿಷ್ಠ ಒಂದು ವರ್ಷದಿಂದ ಗರಿಷ್ಠ **18** ತಿಂಗಳುಗಳ ಅವಧಿಯದ್ದಾಗಿರಬಹುದು.

**ಧನಸಹಾಯದ ಮಿತಿ:**
ನೀವು ಗರಿಷ್ಠ ರೂ **5,00,000/-** ವರೆಗೆ ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸಬಹುದು.

**ಪ್ರಸ್ತಾವನೆಗಳನ್ನು ಕಳುಹಿಸಲು ಅಂತಿಮ ದಿನಾಂಕ:**
**ಬುಧವಾರ, ಆಗಸ್ಟ್ 16, 2023, 11:59 PM (IST)**

## ಪ್ರಸ್ತಾವನೆಗಳನ್ನು ಯಾರು ಕಳುಹಿಸಬಹುದು?

ಈ ಕಾರ್ಯಕ್ರಮದಡಿಯಲ್ಲಿ ವಿವಿಧ ರಂಗಗಳ ಸ್ವತಂತ್ರ ವಿದ್ವಾಂಸರು, ಸಂಶೋಧಕರು ಹಾಗೂ ಕಲಾವಿದರು ಪ್ರಸ್ತಾವನೆಗಳನ್ನು ಕಳುಹಿಸಬಹುದಾಗಿದೆ.
ನೀವು ಭಾರತೀಯ ನಾಗರಿಕರಾಗಿದ್ದಲ್ಲಿ ನೀವು ಅರ್ಜಿ ಸಲ್ಲಿಸಬಹುದಾಗಿದೆ. ನಿಮ್ಮ ಯೋಜನೆಯಲ್ಲಿ ಸಹಯೋಗ ನೀಡುವವರು ಕೂಡ ಭಾರತೀಯ ನಾಗರಿಕರಾಗಿರಬೇಕು. (ಅರ್ಹತೆಯ ಬಗೆಗೆ ಹೆಚ್ಚಿನ ಮಾಹಿತಿಗಾಗಿ ಇಲ್ಲಿ ಕ್ಲಿಕ್ ಮಾಡಿ.

**ಅರ್ಜಿ ಸಲ್ಲಿಸಬೇಕಾದ ವಿಧಾನ:**
ನಿಮ್ಮ ಅಂತಿಮ ಪ್ರಸ್ತಾವನೆಯಲ್ಲಿ ಇವುಗಳು ಇರುವುದು ಅವಶ್ಯಕ:
- ಪ್ರಸ್ತಾವನೆಯ ವಸ್ತುವಿನಲ್ಲಿ ಸ್ಪಷ್ಟ ಸಂಶೋಧನಾ ಉದ್ದೇಶಗಳು, ವಿಸ್ತೃತ ಹಿನ್ನೆಲೆ ಮಾಹಿತಿ ಸಂಗ್ರಹ, ಮುಖ್ಯ ಸಂಶೋಧನಾ ಪ್ರಶ್ನೆಗಳು, ನಿಖರವಾದ ಸಾಂದರ್ಭಿಕ ಕಾರ್ಯವಿಧಾನಗಳು ಹಾಗೂ ನಿರ್ದಿಷ್ಟ ಫಲಿತಾಂಶಗಳು ಇರಬೇಕಾದುದು ಅವಶ್ಯಕ.
- ಈ ಯೋಜನೆಗೆ ಪ್ರಸ್ತುತವಾಗುವ ನಿಮ್ಮ ಈ ಹಿಂದಿನ ಕೆಲಸದ ಉದಾಹರಣೆಗಳು, ಸಹಾಯಕ ವಸ್ತು.
- ನಿಮ್ಮ ಸ್ವವಿವರ.
- ಎಲ್ಲ ಉದ್ದೇಶಿತ ವೆಚ್ಚಗಳನ್ನು ವಿವರಿಸುವ ವಿಸ್ತೃತವಾದ ಆಯ ವ್ಯಯ ಪಟ್ಟಿ**.** ಬೇರೆ ಮೂಲಗಳಿಂದ ಧನಸಹಾಯ ನಿರೀಕ್ಷಿಸಿದ್ದರೆ ಅದರ ವಿವರವನ್ನೂ ಸೇರಿಸಿ. ಹಾಗೂ,
- ನಿಮ್ಮ ವಿಳಾಸ, ದೂರವಾಣಿ ಸಂಖ್ಯೆಗಳು ಹಾಗೂ ಮಿಂಚಂಚೆ ವಿಳಾಸ (ಇ ಮೇಲ್).

**ಸಾಮಾನ್ಯ ಮಾಹಿತಿ:**
● ನಮ್ಮ ಧನಸಹಾಯ ಕೇವಲ ಯೋಜನಾ ಸಂಬಂಧಿತ ಸಿಬ್ಬಂದಿ ವೆಚ್ಚ, ಚಟುವಟಿಕೆಗಳು ಹಾಗೂ ಪ್ರಯಾಣವನ್ನು, ಮತ್ತು ಅವಶ್ಯವಿದ್ದಲ್ಲಿ ಸಾಮಾನ್ಯ ಉಪಕರಣಗಳ ಬಾಡಿಗೆ ಹಾಗೂ ಅವಶ್ಯಕ ವಸ್ತುಗಳಿಗೆ ಬೇಕಾದ ಖರ್ಚನ್ನು ಮಾತ್ರ ಭರಿಸುತ್ತದೆ. ಆಯ-ವ್ಯಯ ಪಟ್ಟಿಯ ಪ್ರತಿ ಅಂಶವೂ ಯೋಜನಾ ಸಂಬಂಧಿತ ನಿರ್ದಿಷ್ಟ ವಸ್ತುವಿನ ವೆಚ್ಚಕ್ಕೆ ಸಂಬಂಧಪಟ್ಟಿರುವುದು ಅವಶ್ಯಕ.
● ಒಟ್ಟು ಆಯ-ವ್ಯಯ ಪಟ್ಟಿಯ ಶೇಕಡಾ 35%ಕ್ಕೆ ಮೀರದಂತೆ ನಿಮ್ಮ ಗೌರವಧನವನ್ನು ವಿನಂತಿಸಬಹುದು .
● ಸಾಂಸ್ಥಿಕ ವೆಚ್ಚಗಳು, ಕಟ್ಟಡ ನಿರ್ಮಾಣ ಅಥವಾ ಮೂಲಸೌಕರ್ಯಗಳ ಅಭಿವೃದ್ಧಿಯನ್ನು ದಯಮಾಡಿ ಯೋಜನಾ ಆಯ-ವ್ಯಯ ಪಟ್ಟಿಯಲ್ಲಿ ಸೇರಿಸಬೇಡಿ. ಉಪಕರಣಗಳ ಖರೀದಿಯನ್ನೂ ನಾವು ಬೆಂಬಲಿಸುವುದಿಲ್ಲ. ಆದರೆ ಖರೀದಿ ಅನಿವಾರ್ಯವಾಗಿದ್ದಲ್ಲಿ, ನಿಮ್ಮ ಯೋಜನೆ ಪೂರ್ಣಗೊಂಡ ನಂತರ ಆ ಉಪಕರಣವನ್ನು ಐ ಎಫ್ ಎ ಗೆ ಹಿಂದಿರುಗಿಸಬೇಕಾಗುತ್ತದೆ.

**ಆಯ್ಕೆಯ ಪ್ರಕ್ರಿಯೆ:**
ಕೊನೆಯ ಸುತ್ತಿಗೆ ಆಯ್ಕೆಯಾದ ಪ್ರಸ್ತಾವನೆಗಳನ್ನು ಬಾಹ್ಯ ತಜ್ಞರ ಆಯ್ಕೆ ಸಮಿತಿ ಮೌಲ್ಯಮಾಪನ ಮಾಡುತ್ತದೆ. ಇದಕ್ಕಾಗಿ ಅರ್ಜಿದಾರರು ತಮ್ಮ ಯೋಜನೆಯ ಪರಿಕಲ್ಪನೆಯನ್ನು ಈ ಸಮಿತಿಯ ಮುಂದೆ ಪ್ರತಿಪಾದಿಸಬೇಕಾಗಬಹುದು. ಆಯ್ಕೆಯಾದ ಯೋಜನೆಗಳನ್ನು **ಡಿಸೆಂಬರ್ 2023**ರಲ್ಲಿ ಘೋಷಿಸಲಾಗುವುದು. ಆಯ್ಕೆಯ ಕುರಿತು ಐ ಎಫ್ ಎ ಯ ನಿರ್ಧಾರವೇ ಅಂತಿಮವಾಗಿರುತ್ತದೆ.

**ಅರ್ಜಿ ಸಲ್ಲಿಸಬೇಕಾದ ವಿಧಾನ:**

- ನೀವು ಇಂಗ್ಲಿಷ್ ಸೇರಿದಂತೆ ಯಾವುದೇ ಭಾರತೀಯ ಭಾಷೆಯಲ್ಲಿ ನಿಮ್ಮ ಪ್ರಸ್ತಾವನೆಯನ್ನು ಬರೆಯಬಹುದು. ವಿವಿಧಭಾಷಾ ಸಂದರ್ಭಗಳಲ್ಲಿ ಸಂವಾದವನ್ನು ಬೆಳೆಸುವ ನಿಟ್ಟಿನಲ್ಲಿ, **ಐಎಫ್ಎ ಇಂಗ್ಲಿಷ್ ಹೊರತಾಗಿ ಇತರ ಭಾರತೀಯ ಭಾಷೆಗಳ ಯೋಜನೆಗಳಿಗೆ ಪ್ರೋತ್ಸಾಹ ನೀಡುತ್ತದೆ.**
- ಅಂತಿಮ ಪ್ರಸ್ತಾವನೆಯನ್ನು ಕಳುಹಿಸುವ ಮೊದಲು ಯಾವುದೇ ಸಲಹೆ ಸೂಚನೆಗಳಿಗಾಗಿ ನಿಮ್ಮ ಪರಿಕಲ್ಪನೆಯನ್ನು ನಮ್ಮೊಂದಿಗೆ
  ಚರ್ಚಿಸಲು, ಹರ್ಷಿತಾ ಬತ್ವಾಲ್ , ಕಾರ್ಯಕ್ರಮ ಅಧಿಕಾರಿ, ಕಲಾ ಸಂಶೋಧನೆ - ಇವರನ್ನು ಸೋಮವಾರ, ಜುಲೈ **31, 2023**ರ ಒಳಗೆ, ಕಲಾ ಸಂಶೋಧನೆಗಾಗಿ ಯೋಜನಾ ಪ್ರಸ್ತಾವನೆ ಎನ್ನುವ ಒಕ್ಕಣೆಯೊಂದಿಗೆ ಮಿಂಚಂಚೆಯ ಮೂಲಕ ಸಂಪರ್ಕಿಸಿ: harshita@indiaifa.org
- ನಿಮ್ಮ ಅಂತಿಮ ಪ್ರಸ್ತಾವನೆಗಳನ್ನು 25ಎಂಬಿ ಮೀರದ ಒಂದೇ ಮಿಂಚಂಚೆಯ ಮುಖಾಂತರ harshita@indiaifa.org ಮಿಂಚಂಚೆಗೆ, ಬುಧವಾರ, ಆಗಸ್ಟ್ **16, 2023, 11:59 PM (IST)**ರ ಒಳಗಾಗಿ ಕಳುಹಿಸಬೇಕು**.**

ಅಪೂರ್ಣ ಪ್ರಸ್ತಾವನೆಗಳನ್ನು ಹಾಗೂ ಅಪೇಕ್ಷಿತ ಅರ್ಹತೆ ಹೊಂದಿರದ ಅರ್ಜಿದಾರರ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ. ಆಯ್ಕೆಯಾದ ಎಲ್ಲ ಯೋಜನೆಗಳನ್ನು ಐ ಎಫ್ ಎ ಕಾರ್ಯಗತಗೊಳಿಸುತ್ತದೆ ಎನ್ನುವುದನ್ನು ಗಮನಿಸಿ.

**ಐ ಎಫ್ ಎ ಮಕ್ಕಳನ್ನೊಳಗೊಂಡಂತೆ ಎಲ್ಲರಿಗೂ ಬೆಂಬಲ, ಗೌರವ, ರಕ್ಷಣೆ ನೀಡುವ ಸುರಕ್ಷಿತ ವಾತಾವರಣವನ್ನು ನಿರ್ಮಿಸಲು ಬದ್ಧವಾಗಿದೆ. ಎಲ್ಲ ಅರ್ಜಿದಾರರೂ ಇದಕ್ಕೆ ಬದ್ಧವಾಗಿದ್ದು, ಇದನ್ನು ಸದಾ ಎತ್ತಿಹಿಡಿಯಬೇಕು.**

***2023-24***ರ ಕಲಾ ಸಂಶೋಧನೆ ಯೋಜನೆಗೆ ***BNP*** ಪರಿಬಾಸ್ ಇಂಡಿಯಾ ನೆರವು ನೀಡುತ್ತಿದೆ***.***